**<u>ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಸೇಡಂ</u>**

**MC No.37-2023**

**(ಇಂದು ದಿಃ 31-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಡಾ.ರಾಹುಲ್ | CW-1 | |
| ತಂದೆ/ಗಂಡನ ಹೆಸರು | ನರಸಣ್ಣ | | |
| ವಯಸ್ಸು | 36 ವರ್ಷ | | |
| ಉದ್ಯೋಗ | ಹಿರಿಯ ವೈಜ್ಞಾನಿಕ ಅಧಿಕಾರಿ , ಪ್ರಾಧಿಶೀಕ ನ್ಯಾಯಾ ವಿಜ್ಞಾನ ಪ್ರಯೋಗಾಲಯ ಹುಬ್ಬಳ್ಳಿ | | |
| ವಾಸ ಸ್ಥಳ | ಹುಬ್ಬಳ್ಳಿ | | |

**<u>ಮುಖ್ಯ ವಿಚಾರಣೆಃ-</u>**

ನಾನು ದಿನಂಾಕ 25.10.2024 ರಂದು Blood sample ಪಡೆದುಕೊಂಡಿದ್ದೆ. ಸದರಿ sample ಗಳನ್ನು ಪರೀಕ್ಷೆ ಒಳಪಡಿಸಿ DNA Extraction ಮಾಡಿ ನಂತರ Extraction ಮಾಡಿದ sample ಅನ್ನು Amplified ಮಾಡಿ Genetic Analayser ಮೂಲಕ PCR Products ಗಳನ್ನು ಸಪೇರೇಟ್ ಮಾಡಿದೇವು. DNA result ಅನ್ನು Analyses ಮಾಡಿ Annexure ಅಲ್ಲಿ ಟೇಬಲ್ ಮುಖಾಂತರ ತೋರಿಸಿದ್ದೇನೆ. ಸಾಕ್ಷಿ ತಾನು ತಯಾಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ DNA ವರಿದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಸಿ-1 ಎಂದು ಗುರುತಿಸಲಾಯಿತು. DNA ವರದಿ ಪ್ರಕಾರ ಗುಂಡಪ್ಪ ತಂದೆ ಬಸವರಾಜ ಇವರು ಅನ್ವಿತಾ ತಂದೆ ಅಲ್ಲ ಎಂದು ತಿಳಿದುಬಂದಿರುತ್ತದೆ.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**<u>ಪಾಟೀ ಸವಾಲುಃ- ಶ್ರೀ RM ವಕೀಲರಿಂದಃ</u>**

ನಾನು Msc and Phd. In Bio technology ಓದಿದ್ದೇನೆ. ನಾನು ಹಿರಿಯ ವೈಜ್ಞಾನಿಕ ಅಧಿಕಾರಿ , ಪ್ರಾಧಿಶೀಕ ನ್ಯಾಯಾ ವಿಜ್ಞಾನ ಪ್ರಯೋಗಾಲಯ ಹುಬ್ಬಳ್ಳಿ ಎಂದು ಕೆಲಸ ಮಾಡುತ್ತೇನೆ. ನಾನು forensic science ವಿದ್ಯಾಬ್ಯಾಸ ಮಾಡಿಲ್ಲ, ನಾನು forensic technician ಅಲ್ಲ . ಸಾಕ್ಷಿ ಮುಂದುವರೆದು ನಾನು expert ಎಂದು ಹೇಳುತ್ತಾರೆ. ನನ್ನ

Designation  forensic expert ಎಂದು ಇಲ್ಲ, ನಾನು Msc and Phd  ಓದಿರುವ ಬಗ್ಗೆ ನಾನು ಸಲ್ಲಿಸಿರುವ ವರದಿಯಲ್ಲಿ ಉಲ್ಲೇಖ ಆಗಿಲ್ಲ ಎಂದರೆ ಸರಿ. DNA ಪರೀಕ್ಷೆಗೆ ರಕ್ತದ ಮಾದರಿ ಪಡೆದುಕೊಳ್ಳ ಬೇಕಾದರೆ ಪರೀಕ್ಷೆಗೆ ಒಳಪಡುವ ವ್ಯಕ್ತಿ ಮತ್ತು ಮಗುವಿನ ದೈಹಿಕ ಆರೋಗ್ಯ ಸರಿಯಾಗಿದೆ ಎಂದು ಪರೀಕ್ಷಿಸಬೇಕು ಎಂದರೆ ಸರಿಯಲ್ಲ, ಯಾವುದಾದರು ಕಾಯಿಲೆ ಇದೆಯಾ ಅಥವಾ ರೋಗ ಇದೆಯಾ ಎಂದು ತಿಳಿದುಕೊಳ್ಳಬೇಕು ಎಂದರೆ ಸರಿಯಲ್ಲ, DNA ಪರೀಕ್ಷೆ ವರದಿ ಅಂತೀಮ ಅಲ್ಲ ಎಂದರೆ ಸರಿಯಲ್ಲ, ಒಬ್ಬ ವ್ಯಕ್ತಿ ಕಾಯಿಲೆಗೆ ಒಳಗಾಗಿ ಬೇರೆಯವರಿಂದ ರಕ್ತ ಪಡೆದುಕೊಂಡ ನಂತರ DNA ಪರೀಕ್ಷೆ ಗೆ ಒಳಪಟ್ಟರೆ DNA ಹೋಲಿಕೆ ಆಗದೆ ಇರಬಹುದು ಎಂದರೆ ಸರಿಯಲ್ಲ,

DNA ಪರೀಕ್ಷೆ ಮಾಡಬೇಕಾದರೆ isolation of DNA and purification of DNA and DNA Analysis ಮಾಡಬೇಕಾಗುತ್ತದೆ ಎಂದರೆ ಸರಿ. ನನ್ನ ವರದಿಯಲ್ಲಿ  isolation of DNA  ಎಂದು ಬರೆದಿಲ್ಲ . ಸಾಕ್ಷಿ ಮುಂದುವರೆದು Extraction ಮತ್ತು isolation  ಎರಡು ಒಂದೇ ಎಂದು ಹೇಳುತ್ತಾರೆ. Extraction ಮತ್ತು isolation  ಎರಡು ಒಂದೇ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಲುಪೀಡ ಮತ್ತು ಪ್ರೋಟೀನ್ಸ and RNA ಬೇರ್ಪಡಿಸಿದ್ದೇನೆ ಎಂದು ನನ್ನ ವರದಿಯಲ್ಲಿ ಉಲ್ಲೇಖ ಇಲ್ಲ, DNA ಮಾಡಬೇಕಾದರೆ ಅವುಗಳನ್ನು ಬೇರ್ಪಡಿಸಬೇಕು ಎಂದರೆ ಸರಿ. ನನ್ನ ವರದಿಯಲ್ಲಿ ಅಶುದ್ದ ಪದಾರ್ಥಗಳನ್ನು ತೆಗೆದು ಹಾಕಿ purification ಮಾಡಿ ಶುದ್ದ ಪದಾರ್ಥಗಳನ್ನು ಪಡೆದು ಪ್ರಕ್ರೀಯೆಗೆ ಒಳಪಡಿಸಿದ್ದೇನೆ ಎಂದು ಉಲ್ಲೇಖ ಮಾಡಿಲ್ಲ, Amplified DNA ಬೇರ್ಪಡಿಸಬೇಕಾದರೆ ಟೇಕ್ನಾಲಜಿ ಬಳಸುತ್ತೇವೆ ಎಂದರೆ ಸರಿ. ಸದರಿ ಟೇಕ್ನಾಲಜಿ ಹೆಸರು ಕಾಪಿಲರಿ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಕೇಪಿಲರಿ ಜೆಲ್ ಎಲೆಕ್ಟ್ರೋ ಪೋರ್ ಶೀಸ್ ಎಂದು ಹೇಳುತ್ತಾರೆ . ಕೇಪಿಲರಿ ಜೆಲ್ ಎಲೆಕ್ಟ್ರೋ ಪೋರ್ ಶೀಸ್ ತಂತ್ರಜ್ಞಾನ ಬಳಸಿದ ಬಗ್ಗೆ ವರದಿಯಲ್ಲಿ ಉಲ್ಲೇಖ ಇಲ್ಲ,  ರಕ್ತ ಮಾದರಿ ತೆಗೆದ ನಂತರ ಸೂಕ್ತ ಟೇಂಪ್ರೇಚರ ಕಂಟ್ರೋಲನಲ್ಲಿ ಇಡಬೇಕು ಎಂದರೆ ಸರಿ. ಅದು 4 ಡಿಗ್ರಿ ಯ ವರೆಗೆ ಇರಬೇಕಾಗುತ್ತದೆ. ಸೇಡಂ ನಿಂದ ಹುಬ್ಬಳ್ಳಿ ಸುಮಾರು 10-12 ಗಂಟೆ ಪಯಣ ಎಂದರೆ ಸರಿ ಸ .ಸ್ಯಾಂಪಲನ್ನು  ಕಚೇರಿಯಲ್ಲಿ ಬೇರಯವರು ಪಡೆದುಕೊಂಡಿದ್ದರು . ಪ್ರಯಾಣದ  ಕಾಲದಲ್ಲಿ ಸ್ಯಾಂಪಲ್ ನ್ನು 4 ಡಿಗ್ರಿ ಒಳಗೆ ಇಟ್ಟದ್ದ ಬಗ್ಗೆ ನನಗೆ ಗೊತ್ತಿಲ್ಲ, ಸ್ಯಾಂಪಲನ್ನು ತರ್ಮಕೋಲ ಐಸ್ ಪ್ಯಾಕನಲ್ಲಿ ತಂದಿದ್ದರು. ಐಸ್ 5 ರಿಂದ 6 ಗಂಟೆ ಮಾತ್ರ ಟೆಂಪ್ರೇಚರ ಕಂಟ್ರೋಲ್ ಮಾಡುತ್ತದೆ ಎಂದರೆ ನನಗೆ ಗೊತ್ತಿಲ್ಲ, ತದಾನಂತರ ಕೂಡ ಅದೇ ಟೆಂಪ್ರೇಚರ್ ಕಾಯ್ದುಕೊಳ್ಳಬೇಕಾತ್ತದೆ

ಎಂದರಲೆ ಸರಿ. ಸ್ಯಾಂಪಲನ್ನು ಎಷ್ಟು ಟೇಂಪ್ರೇಚರನಲ್ಲಿ ತಂದು ಕೊಟ್ಟಿದ್ದರು ನನಗೆ ಗೊತ್ತಿಲ್ಲ. ಟೆಂಪ್ರೇಚರ್ ಕಾಯ್ದಿದುಕೊಳ್ಳದೇ ಇದ್ದರೆ ರಕ್ತ ಗಟ್ಟಿಯಾಗುತ್ತದೆ ಎಂದರೆ ಸರಿಯಲ್ಲ.

ನಾನು ಸ್ಯಾಂಪಲ ಪಡೆದಾಗ ಸ್ಯಾಂಪಲ್ 4 ಡಿಗ್ರಿಯಲ್ಲಿತ್ತು. ಸ್ಯಾಂಪಲ್ 4 ಡಿಗ್ರಿಯಲ್ಲಿತ್ತು ಎಂದು ನನ್ನ ವರದಿಯಲ್ಲಿ ಉಲ್ಲೇಖ ಮಾಡಿಲ್ಲ. 4 ಡಿಗ್ರಿ ಒಳಗೆ ಇದ್ದರೆ DNA ಪರೀಕ್ಷೆಗೆ ಸದರಿ ಸ್ಯಾಂಪಲ್ ಯಾಗ್ಯ ಅಲ್ಲ ಎಂದರೆ ಸರಿಯಲ್ಲ. DNA ವರದಿ ಕೋಡಬೇಕಾದರೆ ಯಾವ ಯಾವ ಟೇಕ್ನಾಲಜಿ ಬಸಸಿದ್ದೇನೆ ಮತ್ತು ಯಾವಾ ಯಾವಾ ರಾಸಾಯನಿಕ ಬಳಸಿದ್ದೇನೆ ಎಂದು ವರದಿಯಲ್ಲಿ ಉಲ್ಲೇಖ ಮಾಡಬೇಕೆಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಅದರ ಬಗ್ಗೆ ಉಲ್ಲೇಖ ಮಾಡಿದ್ದೇನ ೆಎಂದು ಹೇಳುತ್ತಾರೆ. ನಾನು ಆ ಬಗ್ಗೆ ವರದಿಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಾನು DNA ಪರೀಕ್ಷೆ ಮಾಡುವ Expert ಅಲ್ಲ ಎಂದರೆ ಸರಿಯಲ್ಲ. ನಾನು DNAಪರೀಕ್ಷೆ ಮಾಡಬಹುದು ಎಂದು Director State forensic laboratory Bengaluru ನವರು ನನಗೆ Certificate ಕೊಟ್ಟಿದ್ದಾರೆ. ಸದರಿ Certificate ಅನ್ನು ವರದಿ ಜೊತೆ ಸಲ್ಲಿಸಿಲ್ಲ.

ನಾನು ಅರ್ಜಿದಾರ ಮತ್ತು ಅನ್ವಿಕಾರವರ DNA ಪರೀಕ್ಷೆಯನ್ನು ಸರಿಯಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ Expert Opinion ವರದಿ DNA Science ಗೆ ವಿರುದ್ದ ವಾಗಿದೆ ಎಂದರೆ ಸರಿಯಲ್ಲ. ಅನ್ವಿಕಾ ಅರ್ಜಿದಾರನ ಮಗಳು ಅಲ್ಲ ಎಂದು DNA ಪರೀಕ್ಷೆಯಲ್ಲಿ ದೃಡಪಟ್ಟಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ, ಸೇಡಂ.**